ಈ ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲ್ಲೂಕು ಕಾನೂನು ನೆರವು ಸಮಿತಿಗಳ ಮೂಲಕ ರಾಜ್ಯದಲ್ಲೆಡೆಯಲ್ಲಿ ಹಮ್ಮಿಕೊಂಡಿದ್ದು, ಕಾರ್ಯಗತಗೊಳಿಸಲಾಗುತ್ತಿದೆ. 1998 -99ರ ಅವಧಿಯಲ್ಲಿ ಪ್ರತಿ ಜಿಲ್ಲಾ ಕಾನೂನು ಸೇವಾ ಸಮಿತಿಗಳು 10 ಜನತಾ ನ್ಯಾಯಾಲಯಗಳನ್ನು ನಡೆಸುವಂತೆ ಗುರಿಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಇದಲ್ಲದೆ ಭಾರತ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವದ ಅಂಗವಾಗಿ ಪ್ರತಿ ಮೊದಲನೇ ಹಾಗೂ 3ನೇ ಶನಿವಾರಗಳಂದು ಎಲ್ಲಾ ಜಿಲ್ಲಾ ಪ್ರಾಧಿಕಾರ ಮತ್ತು ತಾಲ್ಲೂಕು ಸಮಿತಿಗಳಲ್ಲೂ ಲೋಕ್ ಅದಾಲತ್‌ಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಇವೆಲ್ಲವುಗಳ ಮುಖಾಂತರ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳನ್ನು ರಾಜು ಮುಖಾಂತರ ಇತ್ಯರ್ಥಪಡಿಸಲು ಉದ್ದೇಶಿಸಿದ್ದು, ಜನತೆಗೆ ಶೀಘ್ರಗತಿಯಲ್ಲಿ ನ್ಯಾಯವನ್ನು ಒದಗಿಸಲಾಗುತ್ತಿದೆ.

ಕುಣಿಗಲ್ ನ್ಯಾಯಾಲಯ ಕಟ್ಟಡ ಕಾಮಗಾರಿ ವಿಳಂಬ

198 (523) ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕುಣಿಗಲ್ ನ್ಯಾಯಾಲಯ ಕಟ್ಟಡದ ಕಾಮಗಾರಿಯು ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು:

ಇ) ಯಾವಾಗ ಕಾಮಗಾರಿ ಪೂರ್ಣಗೊಳ್ಳುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಮಂತ್ರಿಗಳು) :

ಅ) ಹೌದು

ಆ) ದಿನಾಂಕ 16-5-94 ರಿಂದ 17-5-95 ರವರೆಗೆ 5 ಬಾರಿ ಟೆಂಡರುಗಳನ್ನು ಆಹ್ವಾನಿಸಿದ್ದು, ಸೂಕ್ತ ಪ್ರತಿಕ್ರಿಯೆ ದೊರಕಲಿಲ್ಲವಾದ್ದರಿಂದ ಆರನೇ (6) ಬಾರಿಗೆ 1995-96ನೇ ಸಾಲಿನಲ್ಲಿ ಟೆಂಡರ್ ಮೇರೆಗೆ ಕೈಗೊಳ್ಳಲಾಯಿತು. ಗುತ್ತಿಗೆ ಕರಾರಿನಂತೆ ಕಾಮಗಾರಿಯು ದಿನಾಂಕ: 15-1-98ಕ್ಕೆ ಪೂರ್ಣಗಳ್ಳಬೇಕಾಗಿತ್ತು. ಆದರೆ ಅನುದಾನ ಮತ್ತು ಪ್ರತ್ಯಯ ಪತ್ರದ ಬಿಡುಗಡೆಯಲ್ಲಿ ವಿಳಂಬವಾಗಿತ್ತು. ಹಾಗೂ ಸಿಮೆಂಟ್ ಕೊರತೆಯ ಕಾರಣದಿಂದಲೂ ಕಾಮಗಾರಿ ಕುಂಠಿತವಾಗಿರುತ್ತದೆ

ಇ) ಡಿಸೆಂಬರ್ 1998ರ ಹೊತ್ತಿಗೆ ಪೂರ್ಣ ಮಾಡುವ ಯೋಜನೆಯಿದೆ.

ತುಮಕೂರು ಜಿಲ್ಲೆಯಲ್ಲಿ ಕೈಗೊಂಡ ಅರಣ್ಯ ಅಭಿವೃದ್ಧಿ ಕಾಮಗಾರಿಗಳು

199 (524) ಶ್ರೀ ಎಸ್. ಸಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತುಮಕೂರು ಜಿಲ್ಲೆ ಸಾಮಾಜಿಕ ಅರಣ್ಯ ವಿಭಾಗದಡಿಯಲ್ಲಿ 1997-98ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು?

ಆ) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಬಗೆಗಿನ ಪ್ರಗತಿ ಏನು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) 1. 1996-97ನೇ ಸಾಲಿನಲ್ಲಿ ಬೆಳೆಸಿದ ನೆಡುತೋಪುಗಳ ನಿರ್ವಹಣೆ 1842 ಹೆಕ್ಟೇರ್

2. 1997-98 ನೇ ಸಾಲಿನಲ್ಲಿ ಹೊಸ ನೆಡುತೋಪುಗಳ ನಿರ್ಮಾಣ 948 ಹೆಕ್ಟೇರ್

3. 1998-99ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ ಮಾಡಲು ಕೈಗೊಂಡ ಮುಂಗಡ ಕಾಮಗಾರಿ 390 ಹೆಕ್ಟೇರ್

4. 1998-99 ನೇ ಸಾಲಿನಲ್ಲಿ ನೆಡುತೋಪು ಬೆಳೆಸಲು ಅವಶ್ಯಕವಿರುವ ಸಸಿಗಳನ್ನು ತಯಾರು ಮಾಡಿರುವುದು 27.72 ಲಕ್ಷ ಸಸಿಗಳು

ಆ) 1. 1996-97 ನೇ ಸಾಲಿನಲ್ಲಿ ಬೆಳೆಸಿದ ನೆಡುತೋಪುಗಳ ನಿರ್ವಹಣೆ 56 ಹೆಕ್ಟೇರ್

2. 1997-98ನೇ ಸಾಲಿನಲ್ಲಿ ಹೊಸ ನೆಡುತೋಪುಗಳ ನಿರ್ಮಾಣ 10 ಹೆಕ್ಟೇರ್

3. 1998-99 ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ ಮಾಡಲು ಕೈಗೊಂಡ ಮುಂಗಡ ಕಾಮಗಾರಿ - 46 ಹೆಕ್ಟೇರ್

4. 1998-99 ನೇ ಸಾಲಿನಲ್ಲಿ ನೆಡುತೋಪು ಬೆಳೆಸಲು ಅವಶ್ಯಕವಿರುವ 9.81 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ.

ತುಮಕೂರು ಕುಣಿಗಲ್ ಮಧ್ಯೆ ಇರುವ ಕೆ.ಕೆ. ರಸ್ತೆ ದುರಸ್ತಿ ಕೆಲಸ ವಿಳಂಬವಾಗಿರುವುದು

200 (521) ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತುಮಕೂರು ಕುಣಿಗಲ್ ಮಧ್ಯೆ ಇರುವ ಕೆ.ಕೆ. ರಸ್ತೆಯ ದುರಸ್ತಿಯು ಅತಿ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದಕ್ಕೆ ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರಕ್ಕೆ ಕೈಗೊಳ್ಳುವ ಕಾರ್ಯಕ್ರಮ ಮತ್ತು ಪರಿಹಾರವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಟೆಂಡರ್ ಆಧಾರದ ಮೇಲೆ ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರು ಕಾರ್ಯ ನಿರ್ವಹಿಸುವಲ್ಲಿ ನಿಧಾನ ಮಾಡಿದ್ದರಿಂದ ವಿಳಂಬವಾಗಿರುತ್ತದೆ.

ಇ) ಟೆಂಡರ್‌ನಲ್ಲಿ ನಿಗಧಿಸಲಾದ ಅವಧಿಯಲ್ಲಿ ಕೆಲಸ ಪ್ರಗತಿ ನೀಡದ ಪ್ರಯುಕ್ತ ವಹಿಸಲಾಗಿದ್ದ ಗುತ್ತಿಗೆಯನ್ನು ನಿಯಮಾವಳಿಯಂತೆ ರದ್ದುಪಡಿಸಿ ಉಳಿಕೆ ಕೆಲಸಗಳಿಗೆ ಮರು ಟೆಂಡರ್ ಕರೆದು